ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
Website : https://kptcl.karnataka.gov.in

ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009

ವಿಷಯ: ಹುಣಸೂರು ತಾಲ್ಲೂಕು, ಹನಗೋಡು ಹಾಗೂ ಜಿ.ವಿ.ಗುಡಿ ಮತ್ತು ಪಿರಿಯಾಪಟ್ಟಣ ತಾಲ್ಲೂಕು, ಬೆಟ್ಟದಪುರಗಳಲ್ಲಿನ 66/11ಕೆ.ವಿ ಉಪಕೇಂದ್ರಗಳ ಆವರಣಗಳಲ್ಲಿ, ಚಾ.ವಿ.ಸ.ನಿ.ನಿ ಯ ಶಾಖಾ ಕಛೇರಿ/ ಉಪವಿಭಾಗ ಕಚೇರಿ ಕಟ್ಟಡಗಳನ್ನು ನಿರ್ಮಿಸಲು ನಿಗಮದ ಜಾಗವನ್ನು ಲೀಸ್ ಆಧಾರದ ಮೇಲೆ ನೀಡುವ ಬಗ್ಗೆ.

ಉಲ್ಲೇಖ:
1. ಕವಿಪ್ರನಿನಿ/ಬಿ9/4948/04-05 ದಿನಾಂಕ 29/04/2005.
2. ಕವಿಪ್ರನಿನಿ/ಬಿ9/4948/04-05 ದಿನಾಂಕ 26/10/2006.
3. ಮು.ಇಂ(ವಿ)/ಪ್ರ.ವ/ಕಾ.ನಿ.ಇಂ(ಸಿ)/ಮೈ/19-20/7899-902 ದಿನಾಂಕ 18/11/2019.
4. ಮು.ಇಂ(ವಿ)/ಪ್ರ.ವ/ಕಾ.ನಿ.ಇಂ(ಸಿ)/ಮೈ/20-21/2602-04 ದಿನಾಂಕ 10/07/2020.
5. ಶ್ರೀ. ಎಸ್.ಟಿ. ಸೋಮಶೇಖರ್, ಮಾನ್ಯ ಸಹಕಾರ ಸಚಿವರು ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು ರವರ ಟಿಪ್ಪಣಿ ದಿನಾಂಕ 17/08/2020.
6. ಮು.ಇಂ(ವಿ)/ಪ್ರ.ವ/ಕಾ.ನಿ.ಇಂ(ಸಿ)/ಮೈ/20-21/4196-98 ದಿನಾಂಕ 26/08/2020.
7. ಸನ್ಮಾನ್ಯ ಮುಖ್ಯ ಮಂತ್ರಿಯವರ ಕಾರ್ಯದರ್ಶಿ ರವರ ಪತ್ರ ಸಂಖ್ಯೆ ಮುಮಕಾ 2538/2020 ದಿನಾಂಕ 04/09/2020.

**ಪೀಠಿಕೆ:**

1. ಚಾ.ವಿ.ಸ.ನಿ.ನಿ ಹುಣಸೂರು ವಿಭಾಗ ವ್ಯಾಪ್ತಿಯಲ್ಲಿನ ಶಾಖಾ ಕಚೇರಿ/ ಉಪವಿಭಾಗ ಕಚೇರಿ ಕಟ್ಟಡಗಳನ್ನು ನಿರ್ಮಿಸಲು ಹುಣಸೂರು ತಾಲ್ಲೂಕು ಹನಗೂಡು ಮತ್ತು ಜಿ.ವಿ ಗುಡಿ ಹಾಗೂ ಪಿರಿಯಾಪಟ್ಟಣ ತಾಲ್ಲೂಕು ಬೆಟ್ಟದಪುರಗಳಲ್ಲಿನ 66/11ಕೆ.ವಿ ಉಪಕೇಂದ್ರಗಳ ಆವರಣಗಳಲ್ಲಿನ ಜಾಗಗಳನ್ನು ಲೀಸ್ ಆಧಾರದ ಮೇಲೆ ನೀಡಲು ಚಾ.ವಿ.ಸ.ನಿ.ನಿ ರವರು ಕೋರಿರುತ್ತಾರೆ.

2. ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಮೈಸೂರು ರವರು ಚಾ.ವಿ.ಸ.ನಿ.ನಿ ಕೋರಿರುವ ಜಾಗವನ್ನು ನೀಡುವುದರಿಂದ ನಿಗಮದ ಅಭಿವೃದ್ಧಿ ಕಾರ್ಯಗಳಿಗೆ ದಕ್ಕೆಯಾಗುವುದಿಲ್ಲವೆಂದು ತಿಳಿಸಿರುತ್ತಾರೆ. ಸದರಿ ಜಾಗಗಳ ಭೂ ದಾಖಲೆಗಳು ಕವಿಪ್ರನಿನಿಯ ಹೆಸರಿನಲ್ಲಿರುತ್ತದೆಯೆಂದು ಸಹ ತಿಳಿಸಿರುತ್ತಾರೆ.

3. ಶ್ರೀ. ಹೆಚ್. ಟಿ ಸೋಮಶೇಖರ್, ಮಾನ್ಯ ಸಹಕಾರ ಸಚಿವರು ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರ ಉಲ್ಲೇಖ (5) ರ ಪತ್ರದಲ್ಲಿ ಚಾ.ವಿ.ಸ.ನಿ.ನಿ ಕೋರಿರುವ ಜಾಗಗಳನ್ನು ಕಚೇರಿ ಕಟ್ಟಡ ನಿರ್ಮಿಸಲು ಲೀಸ್ ಆಧಾರದ ಮೇಲೆ ನೀಡುವಂತೆ ಕೋರಿರುತ್ತಾರೆ.

4. ಶ್ರೀ. ಅಡಗೂರು ಹೆಚ್ ವಿಶ್ವನಾಥ್, ಮಾನ್ಯ ವಿಧಾನ ಪರಿಷತ್ ಸದಸ್ಯರು ರವರು ಸಹ ಹುಣಸೂರು ವಿಭಾಗ ವ್ಯಾಪ್ತಿಯಲ್ಲಿರುವ ಕಚೇರಿಗಳು ಹಾಲಿ ಇಕ್ಕಾಟಾದ ಹಳೆಯ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು ಸಾರ್ವಜನಿಕರ ಅನುಕೂಲಕ್ಕಾಗಿ ನೂತನ ಕಟ್ಟಡ ನಿರ್ಮಿಸಬೇಕಾಗಿದ್ದು, ಕವಿಪ್ರನಿನಿಯ ಜಾಗಗಳನ್ನು ಚಾ.ವಿ.ಸ.ನಿ.ನಿ ಗೆ ಲೀಸ್ ಆಧಾರದ ಮೇಲೆ ನೀಡಲು ಸನ್ಮಾನ್ಯ ಮುಖ್ಯ ಮಂತ್ರಿಗಳಿಗೆ ಪತ್ರ ಸಲ್ಲಿಸಿದ್ದು, ಸದರಿ ಪತ್ರವನ್ನು ಉಲ್ಲೇಖ (7) ರಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳ ಕಾರ್ಯದರ್ಶಿಗಳು, ಸದರಿಯವರ ಮನವಿಯ ಬಗ್ಗೆ ಕ್ರಮಕೈಗೊಳ್ಳಲು ಸೂಚಿಸಿರುತ್ತಾರೆ.

5. ಚಾ.ವಿ.ಸ.ನಿ.ನಿ ಯಿಂದ ಮೈಸೂರು ಪ್ರಸರಣ ವ್ಯಾಪ್ತಿಯಲ್ಲಿ ಕವಿಪ್ರನಿನಿ ಕಟ್ಟಡಗಳ ಬಾಡಿಗೆ, ನಿರ್ವಹಣೆ ವೆಚ್ಚ, ನೀರು ಸರಬರಾಜು ವೆಚ್ಚ ಹಾಗೂ ಲೀಸ್ ಮೊತ್ತಗಳ ಪಾವತಿ ದಿನಾಂಕ 30/03/2020 ರವರೆಗೆ ರೂ.319.61 ಲಕ್ಷಗಳು ಬಾಕಿ ಇರುತ್ತದೆ.

6. ಕವಿಪ್ರನಿನಿ ಯ ಒಡೆತನದಲ್ಲಿದ್ದ ಒಟ್ಟಾರೆ ಆಸ್ತಿಯನ್ನು ಪ್ರಸರಣ ಆಸ್ತಿ ಹಾಗೂ ವಿತರಣಾ ಆಸ್ತಿಗಳೆಂದು ವರ್ಗೀಕರಿಸಿದ ನಂತರ, ಎಸ್ಕಾಂ ಗಳಿಗೆ ಅವಶ್ಯವಿರುವ ಕವಿಪ್ರನಿನಿ ಜಾಗವನ್ನು ಹಾಗೂ ಕವಿಪ್ರನಿನಿ ಗೆ ಅವಶ್ಯವಿರುವ ಎಸ್ಕಾಂ ಗಳ ಜಾಗಗಳನ್ನು ಲೀಸ್ ಆಧಾರದ ಮೇಲೆ ನೀಡುವ ಬಗ್ಗೆ, ಉಲ್ಲೇಖ (1) ರ ಕವಿಪ್ರನಿನಿ ಆದೇಶದಲ್ಲಿ Arms-length arrangement ನ್ನು ಅನುಮೋದಿಸಲಾಗಿದೆ.

7. ಹುಣಸೂರು ತಾಲ್ಲೂಕು, ಹನಗೂಡು ಹಾಗೂ ಜಿ. ವಿ. ಗುಡಿ ಮತ್ತು ಪಿರಿಯಾಪಟ್ಟಣ ತಾಲ್ಲೂಕು, ಬೆಟ್ಟದಪುರಗಳಲ್ಲಿನ ನಿಗಮದ 66/11ಕೆ.ವಿ ಉಪಕೇಂದ್ರಗಳ ಆವರಣದಲ್ಲಿ ಶಾಖಾ ಕಚೇರಿ/ ಉಪವಿಭಾಗ ಕಚೇರಿ ನಿರ್ಮಿಸಲು ಕೋರಿರುವ ಚಾ.ವಿ.ಸ.ನಿ.ನಿ ಯ ಪ್ರಸ್ತಾವನೆಯನ್ನು ದಿನಾಂಕ 30/11/2020 ರಂದು ನಡೆದ ಮಂಡಳಿ ಸಭೆಯಲ್ಲಿ ಮಂಡಿಸಲಾಗಿದ್ದು, ಹಾಲಿ ಇರುವ Arms-length arrangement ರನ್ವಯ ಸದರಿ ಜಾಗಗಳನ್ನು ಲೀಸ್ ಆಧಾರದ ಮೇಲೆ ನೀಡಲು ಅನುಮೋದನೆ ಪಡೆಯಲಾಗಿದೆ. ಹಾಗೂ ಚಾ.ವಿ.ಸ.ನಿ.ನಿ ಯಿಂದ ಕಟ್ಟಡಗಳ ಲೀಸ್ ಮೊತ್ತ, ನಿರ್ವಹಣೆ ವೆಚ್ಚ, ನೀರು ಸರಬರಾಜು ವೆಚ್ಚ, ಬಾಡಿಗೆ ಮೊತ್ತ ಬಾಕಿ ಇರುವ ರೂ.319.61 ಲಕ್ಷಗಳನ್ನು ಪಾವತಿಸಿಕೊಂಡು ಸದರಿ ಜಾಗಗಳನ್ನು ಚಾ.ವಿ.ಸ.ನಿ.ನಿ ಗೆ ಹಸ್ತಾಂತರಿಸುವಂತೆ ನಿರ್ದೇಶನ ನೀಡಿದೆ.

8. ಈ ಹಿನ್ನೆಲೆಯಲ್ಲಿ, ಕೆಳಕಂಡಂತೆ ಆದೇಶಿಸಲಾಗಿದೆ.

**ಕವಿಪ್ರನಿನಿ/ಆದೇಶ ಸಂಖ್ಯೆ: ಬಿ9/39328/16-17/ಬೆಂಗಳೂರು** **ದಿನಾಂಕ** 3 FEB 2021

ದಿನಾಂಕ 30/11/2020 ರ 122 ನೇ ಕವಿಪ್ರನಿನಿ ಮಂಡಳಿ ನಿರ್ದೇಶಕರ ಸಭೆಯ ನಡವಳಿಯನ್ವಯ ಈ ಕೆಳಕಂಡ ಉಪಕೇಂದ್ರಗಳ ಆವರಣದಲ್ಲಿ ಚಾ.ವಿ.ಸ.ನಿ.ನಿ ಯ ಶಾಖಾ ಕಚೇರಿ/ ಉಪವಿಭಾಗ ಕಚೇರಿ ನಿರ್ಮಿಸಲು ನಿವೇಶನಗಳನ್ನು ಲೀಸ್ ಆಧಾರದ ಮೇಲೆ ನೀಡಲು ಆದೇಶಿಸಲಾಗಿದೆ.

| ಕ್ರ. ಸಂ | ಉಪಕೇಂದ್ರದ ವಿವರ | ನಿವೇಶನದ ವಿಸ್ತೀರ್ಣ | ನಿರ್ಮಿಸಲು ಉದ್ದೇಶಿಸಿರುವ ಕಟ್ಟಡದ ವಿವರ |
|---|---|---|---|
| 1 | 66/11 ಕೆವಿ ವಿದ್ಯುತ್ ಉಪಕೇಂದ್ರ, ಹನಗೂಡು | 250 ಚದುರ ಮೀಟರ್ | ಶಾಖಾ ಕಚೇರಿ ಕಟ್ಟಡ |
| 2 | 66/11 ಕೆವಿ ವಿದ್ಯುತ್ ಉಪಕೇಂದ್ರ, ಜಿ.ವಿ.ಗುಡಿ | 250 ಚದುರ ಮೀಟರ್ | ಶಾಖಾ ಕಚೇರಿ ಕಟ್ಟಡ |
| 3 | 66/11 ಕೆವಿ ವಿದ್ಯುತ್ ಉಪಕೇಂದ್ರ, ಬೆಟ್ಟದಪುರ | 270 ಚದುರ ಮೀಟರ್ | ಉಪವಿಭಾಗ ಕಚೇರಿ ಕಟ್ಟಡ |

ಈ ಹಿನ್ನೆಲೆಯಲ್ಲಿ, ಮೇಲೆ ತಿಳಿಸಿದ ವಿಸ್ತೀರ್ಣದ ಜಾಗಗಳನ್ನು ಚಾ.ವಿ.ಸ.ನಿ.ನಿ ಯ ಶಾಖಾ/ಉಪವಿಭಾಗ ಕಚೇರಿ ನಿರ್ಮಿಸಲು ಈ ಕೆಳಕಂಡ ಷರತ್ತುಗಳನ್ವಯ ಲೀಸ್ ಆಧಾರದ ಮೇಲೆ ನೀಡಲು ಕೂಡಲೇ ಅಗತ್ಯ ಕ್ರಮಕೈಗೊಳ್ಳುವಂತೆ ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಮೈಸೂರು ರವರಿಗೆ ನಿರ್ದೇಶನ ನೀಡಲಾಗಿದೆ.

1. ಚಾ.ವಿ.ಸ.ನಿ.ನಿ ಕೋರಿಕೆಯನ್ವಯ ಸದರಿ ಉಪಕೇಂದ್ರಗಳ ಆವರಣಗಳನ್ನು ಮೇಲೆ ತಿಳಿಸಿದ ವಿಸ್ತೀರ್ಣದಂತೆ ಸೂಕ್ತ ನಿವೇಶನವನ್ನು ಗುರುತಿಸಿ ನಿಗಮದ ಉಪಕೇಂದ್ರದ ಅಭಿವೃದ್ಧಿ ಕಾಮಗಾರಿಗಳಿಗೆ ದಕ್ಕೆಯಾಗದಂತೆ ಎಲ್ಲೆ ಗುರುತಿಸಿ ಚಾ.ವಿ.ಸ.ನಿ.ನಿ ಯ ಕಟ್ಟಡಗಳ ನಿರ್ಮಾಣಕ್ಕೆ 30 ವರ್ಷಗಳ ಲೀಸ್ ಆಧಾರದ ಮೇಲೆ ಹಂಚಿಕೆ ಮಾಡುವುದು.

2. ಸದರಿ ಜಾಗಗಳನ್ನು ಚಾ.ವಿ.ಸ.ನಿ.ನಿ ಗೆ ನೀಡುವ ಸಂಬಂಧ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಟಿಎಲ್ ಮತ್ತು ಎಸ್‌ಎಸ್ ವಿಭಾಗ, ಹೂಟಗಳ್ಳಿ ರವರು ಚಾ.ವಿ.ಸ.ನಿ.ನಿ ನೊಂದಿಗೆ ಲೀಸ್ ಒಪ್ಪಂದ ಮಾಡಿಕೊಳ್ಳುವುದು.
3. ಸದರಿ ಜಾಗಗಳನ್ನು ಹಾಲಿ ಮಾರ್ಗಸೂಚಿ ಬೆಲೆಯನ್ವಯ ಹಾಗೂ ಕವಿಪ್ರನಿನಿ ಮತ್ತು ಎಸ್ಕಾಂ ಗಳ ನಡುವೆ ಇರುವ Arms-length arrangement ನ ನಿಯಮಗಳಂತೆ, ವಾರ್ಷಿಕ ಲೀಸ್ ಮೊತ್ತಗಳನ್ನು ಲೆಕ್ಕಾಚಾರ ಮಾಡಿ ಪಾವತಿಸುವಂತೆ, ಚಾ.ವಿ.ಸ.ನಿ.ನಿ ಗೆ ಸೂಚಿಸುವುದು.
4. ಸದರಿ ಲೀಸ್ ಮೊತ್ತಗಳನ್ನು ಪ್ರತಿ 5 ವರ್ಷಗಳಿಗೊಮ್ಮೆ, ಅಂದಿನ ಮಾರ್ಗಸೂಚಿ ಬೆಲೆಯನ್ವಯ ಹಾಗೂ Arms-length arrangement ನ ನಿಯಮಗಳನ್ವಯ, ಪರಿಷ್ಕರಿಸುವುದು. ಹಾಗೂ ವಾರ್ಷಿಕ ಲೀಸ್ ಮೊತ್ತಗಳನ್ನು, ಪ್ರತಿ ವರ್ಷ ಏಪ್ರಿಲ್ ಮಾಹೆಯ ಮೊದಲ ವಾರದಲ್ಲಿ, ಮುಂಗಡವಾಗಿ ಹೂಟಗಳ್ಳಿ ಟಿಎಲ್ ಮತ್ತು ಎಸ್‌ಎಸ್ ವಿಭಾಗಕ್ಕೆ, ಪಾವತಿಸುವಂತೆ ಚಾ.ವಿ.ಸ.ನಿ.ನಿ ಗೆ ಸೂಚಿಸುವುದು.
5. ಚಾ.ವಿ.ಸ.ನಿ.ನಿ ಗೆ ನೀಡಲು ಅನುಮೋದಿಸಿರುವ ಜಾಗಗಳನ್ನು, ಉದ್ದೇಶಿತ ಕಟ್ಟಡಗಳ ನಿರ್ಮಾಣಕ್ಕೆ ಮಾತ್ರ ಉಪಯೋಗಿಸುವಂತೆ ಹಾಗೂ ಬೇರೆ ಯಾವುದೆ ಉದ್ದೇಶಕ್ಕೆ ಬಳಸಬಾರದೆಂಬ, ಷರತ್ತನ್ನು ವಿಧಿಸುವುದು.
6. ಚಾ.ವಿ.ಸ.ನಿ.ನಿ ಗೆ ನೀಡಲು ಅನುಮೋದಿಸಿರುವ ಜಾಗಗಳ ಕರಾರು ಒಪ್ಪಂದ ಮಾಡಿಕೊಂಡ ದಿನದಿಂದ, ಒಂದು ವರ್ಷದ ಅವಧಿಯೊಳಗೆ, ಉದ್ದೇಶಿತ ಕಟ್ಟಡಗಳನ್ನು ನಿರ್ಮಾಣಕ್ಕೆ ಕ್ರಮಕೈಗೊಳ್ಳುವಂತೆ ತಿಳಿಸುವುದು, ಇಲ್ಲವಾದ್ದಲ್ಲಿ, ಒಪ್ಪಂದದ ಕರಾರುಗಳು ರದ್ದಾಗುವುದೆಂಬ ಷರತ್ತನ್ನು ವಿಧಿಸುವುದು.
7. ನಿಗಮ ಲೀಸ್ ನೀಡಲು ಅನುಮೋದಿಸಿರುವ ಜಾಗಗಳನ್ನು ಒತ್ತುವರಿಯಾಗದಂತೆ ಸಂರಕ್ಷಿಸಿಕೊಳ್ಳಲು ಸೂಕ್ತ ಕ್ರಮಕೈಗೊಳ್ಳಲು ಚಾ.ವಿ.ಸ.ನಿ.ನಿ ಗೆ ಸೂಚಿಸುವುದು.
8. ಲೀಸ್ ಆಧಾರದ ಮೇಲೆ ಚಾ.ವಿ.ಸ.ನಿ.ನಿ ಗೆ ನೀಡಲು ಅನುಮೋದಿಸಿರುವ ಜಾಗಗಳ ಬಗ್ಗೆ, ಸಂಬಂಧಪಟ್ಟ ಟಿಎಲ್ ಮತ್ತು ಎಸ್‌ಎಸ್ ವಿಭಾಗದ ಆಸ್ತಿ ಪುಸ್ತಕಗಳಲ್ಲಿ, ಅಗತ್ಯ ದಾಖಲಾತಿಗಳನ್ನು ಮಾಡುವುದು.
9. ಚಾ.ವಿ.ಸ.ನಿ.ನಿ ಗೆ ನೀಡಲು ಅನುಮೋದಿಸಿರುವ ಜಾಗಗಳ ಬಗ್ಗೆ ನಿಗಮದ ದಿನಾಂಕ 24/04/2005 ರ ಆದೇಶ ಹಾಗೂ 26/10/2006 ಸುತ್ತೋಲೆಯಲ್ಲಿ ತಿಳಿಸಿರುವ Arms-length arrangement ನ ನಿಯಮಗಳನ್ವಯ ಮುಂದಿನ ಅಗತ್ಯ ಕ್ರಮಕೈಗೊಳ್ಳುವುದು.

ಆದೇಶದ ಮೇರೆಗೆ

ನಿರ್ದೇಶಕರು (ಆ ಮತ್ತು ಮಾ.ಸಂ)
ಕವಿಪ್ರನಿನಿ, ಬೆಂಗಳೂರು.

**ಪ್ರತಿಗಳು:-**

1. ವ್ಯವಸ್ಥಾಪಕ ನಿರ್ದೇಶಕರು, ಚಾ.ವಿ.ಸ.ನಿ.ನಿ, ಮೈಸೂರು.
2. ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಕವಿಪ್ರನಿನಿ, ಮೈಸೂರು.
3. ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ) /(ಆಂತರಿಕ ಪರಿಶೋಧನೆ), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
4. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
5. ಅಧೀಕ್ಷಕ ಇಂಜಿನಿಯರ್ (ವಿ), ಪ್ರಸರಣ (ಕಾ ಮತ್ತು ನಿ) ವೃತ್ತ, ಕವಿಪ್ರನಿನಿ, ಮೈಸೂರು.
6. ಅಧೀಕ್ಷಕ ಇಂಜಿನಿಯರ್ (ಸಿವಿಲ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
7. ಅಧೀಕ್ಷಕ ಇಂಜಿನಿಯರ್ (ವಿ), (ಐಟಿ) – ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು
8. ಲೆಕ್ಕ ನಿಯಂತ್ರಣಾಧಿಕಾರಿ, ಪ್ರಸರಣ ವಲಯ, ಕವಿಪ್ರನಿನಿ, ಮೈಸೂರು.
9. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಟಿ ಎಲ್ ಮತ್ತು ಎಸ್ ಎಸ್ ವಿಭಾಗ, ಕವಿಪ್ರನಿನಿ, ಹೂಟಗಳ್ಳಿ
10. ಕಾರ್ಯನಿರ್ವಾಹಕ ಇಂಜಿನಿಯರ್ (ಸಿವಿಲ್), ಪ್ರಸರಣ ವಲಯ, ಕವಿಪ್ರನಿನಿ, ಮೈಸೂರು.
11. ಉಪಲೆಕ್ಕ ನಿಯಂತ್ರಣಾಧಿಕಾರಿ (ಆಂತರಿಕ ಪರಿಶೋಧನೆ), ಪ್ರಸರಣ ವಲಯ, ಕವಿಪ್ರನಿನಿ, ಮೈಸೂರು.
12. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಪ್ರಸರಣ)/ ನಿರ್ದೇಶಕರು (ಹಣಕಾಸು)/ ನಿರ್ದೇಶಕರು (ಆ ಮತ್ತು ಮಾ. ಸಂ) ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
13. ಲೆಕ್ಕಾಧಿಕಾರಿ (ಕೋಢೀಫಿಕೇಷನ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.